ಪಂಪನ ಕಾಲದ ಸಾಮಾನ್ಯ ಜೀವನವೊಂದರ ಚಿತ್ರವೇ ಆಗಿದೆ. ಹೀಗಾಗಿಯೇ, ಪಂಪನ ಕಾವ್ಯಗಳಲ್ಲಿ ಧರ್ಮ, ಕಾವ್ಯಧರ್ಮದ ಜೊತೆಗೆ ಅಪರೂಪದ ಬಾಳಿನ ಶೋಧನೆ ಕೂಡ ನಡೆದಿದೆ. ವಜ್ರಜಂಘ–ಶ್ರೀಮತಿಯರ ಸಹಮರಣ ಪ್ರಸಂಗದಲ್ಲಿ ಪಂಪ ಅತಿಶಯವಾದ ಭೋಗ ಮತ್ತು ಸಾವಿನ ಚಿತ್ರವನ್ನು ನೀಡುವುದರ ಮೂಲಕ, ಜೀವನದ ಪರಸ್ಪರ ಅವಲಂಬನೆಯನ್ನು ಸೂಚಿಸಿದಂತಿದೆ:

ಬಿಡದೆಪೊಗೆಸುತ್ತೆ ತೋಳಂ | ಸಡಿಲಿಸದಾಪ್ರಾಣವಲ್ಲಭರ್ ಪ್ರಾಣಮನಂ
ದೊಡಗಳೆದರೋಪರೋಪರೊ | ಳೊಡ ಸಾಯಲ್ ಪಡೆದರಿನ್ನವುಂಸೈಪೊಳವೇ.

ಒಂದು ದಿನ ಏಕಾಂತ ಭವನದಲ್ಲಿ ಮೈಮರೆತು ಮಲಗಿದ್ದಾಗ, ಸೇವಕ ಕೇಶ ಸಂಸ್ಕಾರಕ್ಕೆಂದು ಧೂಪಧೂಮವನ್ನು ಹೊತ್ತಿಸಿ ಹೊರಟು ಹೋಗಿದ್ದಾನೆ. ಶಯ್ಯಾಗೃಹದ ಗವಾಕ್ಷವನ್ನು ತೆರೆಯುವುದು ಮರೆತು ಹೋಗಿದೆ. ತೋಳ್ತೆಕ್ಕೆಯಲ್ಲಿ ಮಲಗಿದ್ದ ದಂಪತಿ ಉಸುರು ಕಟ್ಟಿ ಸತ್ತು ಹೋದರು. ಕೃಷ್ಣಾಗರು ಧೂಪದ ಹೊಗೆಯು ಕೃಷ್ಣಸರ್ಪ ಕಚ್ಚಿಕೊಲ್ಲುವಂತೆ ಆ ದಂಪತಿಯನ್ನು ಕೊಂದು ಹಾಕಿತು! ಜೊತೆಯಾಗಿ ಪ್ರೇಮದಿಂದ ಬಾಳಿದವರು ಜೊತೆಯಲ್ಲಿಯೇ ಸಾಯುವುದಕ್ಕಿಂತ ದೊಡ್ಡ ಪುಣ್ಯವುಂಟೆ ಎಂದಿದ್ದಾನೆ ಕವಿ. ಈ ಸನ್ನಿವೇಶ ನಿರ್ಮಾಣ ಹಾಗೂ ದೃಶ್ಯಕಲ್ಪನೆಯಲ್ಲಿ ಪಂಪನ ಸ್ವತಂತ್ರ ಪ್ರತಿಭೆ ಅತ್ಯಂತ ಚಿತ್ತಾಕರ್ಷಕವಾಗಿ ವ್ಯಕ್ತಗೊಂಡಿದೆ.

ನೀಲಾಂಜನೆಯ ನೃತ್ಯಪ್ರಸಂಗ ಚಿಕ್ಕ ಕಾವ್ಯ ಭಾಗವಾದರೂ, ಪರಿಣಾಮದಲ್ಲಿ ದೊಡ್ಡದು. ಹಲವು ಕಾಲ ಸಂಸಾರ ಜೀವನವನ್ನು ನಡೆಸಿದ ಪುರುದೇವ ಪರಿನಿಷ್ಕ್ರಮಣಕ್ಕೆ ಸಿದ್ಧನಾಗುತ್ತಾನೆ. ಅವನಲ್ಲಿ ಭೋಗಾಸಕ್ತಿ ಕುಂದಿದೆ. ಈ ಸಂದರ್ಭದಲ್ಲಿ ದೇಹದ ಅಸ್ಥಿರತೆಯನ್ನು, ಜೀವನದ ಅನಿತ್ಯತೆಯನ್ನು ಸಾರುವ ಒಂದು ಘಟನೆ ನಡೆಯುತ್ತದೆ. ಇಂದ್ರ ನೀಲಾಂಜನೆಯ ನೃತ್ಯವನ್ನು ಏರ್ಪಡಿಸುತ್ತಾನೆ, 'ಎವೆಯಿಕ್ಕದೆ' ಪ್ರೇಕ್ಷಕರು ನೋಡುತ್ತಿದ್ದಾರೆ. ತತ್‌ಕ್ಷಣದಲ್ಲಿ ನೀಲಾಂಜನೆ ಅದೃಶ್ಯಳಾಗುತ್ತಾಳೆ. ಆಗ ರಸಭಂಗವಾಗುವುದೆಂದು ತಿಳಿದ ಇಂದ್ರ ಅದೇ ರೀತಿಯ ಆಕಾರವೊಂದನ್ನು ನಿರ್ಮಿಸಿ ನಾಟ್ಯ ಮುಂದುವರೆಯುವಂತೆ ಮಾಡುತ್ತಾನೆ. ಅಲ್ಲಿದ್ದ ಯಾರಿಗೂ ಈ ರಹಸ್ಯ ಸೃಷ್ಟಿ ತಿಳಿಯುವುದಿಲ್ಲ; ಆದರೆ ಪುರುದೇವನಿಗೆ ತಿಳಿಯುತ್ತದೆ. ದೇಹದ ಅನಿತ್ಯತೆಯನ್ನು ಕಂಡು ಬೆರಗಾಗುತ್ತಾನೆ. ಒಡನೆಯೇ ಆತನಲ್ಲಿ ವೈರಾಗ್ಯ ಉದಯಿಸುತ್ತದೆ. ನೀಲಾಂಜನೆಯ ಸಾವು, ಇಂದ್ರನಿಂದಾಗುವ ಯಥಾರೂಪ ಸೃಷ್ಟಿ, ಪುರುದೇವನ ನಿರ್ವೇಗ–ಇವೆಲ್ಲವನ್ನೂ ಏಕಕಾಲದಲ್ಲಿ ಪಂಪ ಪರಿಣಾಮಕಾರಿಯಾಗಿ ನಿರೂಪಿಸಿದ್ದಾನೆ:

ನಾರೀರೂಪದ ಯಂತ್ರಂ | ಚಾರುತರಂ ನೋಡೆ ನೋಡೆಕರಗಿದುದೀಸಂ
ಸಾರದ ನಿತ್ಯತೆ ಮನದೊಳ್ | ಬೇರೊಡೆದುದೀಗಳೆಂತಿದಂ ಕಡೆಗಣಿಪೆಯಂ

ತನು ರೂಪ ವಿಭವ ಯೌವನ | ಧನ ಸೌಭಾಗ್ಯಾಯುರಾದಿಗಳ್ಗೆಣೆ ಕುಡುಮಿಂ
ಚಿನ ಪೊಳೆಪು ಮುಗಿಲ ನೆಳಲಿಂ | ದ್ರನ ಬಿಲ್ ಬೊಬ್ಬುಳಿಕೆಯುರ್ವು ಪರ್ವಿದ ಭೋಗಂ

ನೀಲಾಂಜನೆ ಮಿಂಚಿನಂತೆ ಅದೃಶ್ಯೆಯಾದಳು. ಆಗ, ನಾರೀ ರೂಪದ ಯಂತ್ರ ಕಾಣುತ್ತಿರುವಂತೆಯೆ ಕರಗಿ ಹೋದಂತೆ ಭಾಸವಾಗಿ ಪುರುದೇವನಿಗೆ ಸಂಸಾರದ ಕ್ಷಣಿಕತೆಯ ಅರಿವಾಯಿತು. 'ಕುಡುಮಿಂಚಿನ ಹೊಳಪು', 'ಮೋಡದ ನೆರಳು', 'ಕಾಮನ ಬಿಲ್ಲು' – ಇವುಗಳಂತೆ ಭೋಗ ನಶ್ವರವಾದುದು. ನೀರ ಮೇಲಿನ ಗುಳ್ಳೆಯಂತೆ ಅದು ಹೊಡೆದು ಹೋಗುವಂಥದ್ದು. ಈ ದರ್ಶನಾಕಾಂಕ್ಷೆಯುಳ್ಳ ಪಂಪ ನೀಲಾಂಜನೆಯ ನೃತ್ಯ ಪ್ರಸಂಗದಲ್ಲಿ ಲೌಕಿಕ ನೆಲೆಯಿಂದ ರೂಪಗೊಳ್ಳುವ ಒಂದು ಉನ್ನತ